

ರಸ್ತೆ ಆಜೂಬಾಜು ಮತ್ಸ್ಯಕನ್ಯೆಯರು ಪ್ರತ್ಯಕ್ಷವಾದರೆ ಹೇಗಿರುತ್ತದೆ? ಮೀನಿಗೂ, ಕನ್ಯೆಗೂ ಹೋಲಿಸಿ ಕವನ ಹೊಸೆಯುವ ಹುಕ್ಕಿ ಬಂದುಬಿಡುತ್ತದಾ? ಅಮೆರಿಕದ ಕೂನಿ ಐಸ್‌ಲ್ಯಾಂಡ್‌ನಲ್ಲಿ ವರ್ಷಕ್ಕೊಮ್ಮೆ ನಡೆಯುವ ಮತ್ಸ್ಯಕನ್ಯೆಯರ ಹಬ್ಬದಲ್ಲಿ ಜೊತೆ ಕೊಡಲು ಕಡಲಾಳದ ತರಾವರಿ ಜೀವಿಗಳೆಲ್ಲ ರಸ್ತೆಯಲ್ಲಿ ಈಜು ಬೀಳುತ್ತವೆ. ಯಾವುದರ ಮೇಲೆ ಕವನ, ಯಾವುದರ ಮೇಲೆ ಕಾವ್ಯ?

ಬ್ರಸೆಲ್ಸ್‌ನಲ್ಲಿ ಪ್ರತಿ ವರ್ಷ ನಡೆಯುವ ಹಬ್ಬ ಕಂ ಪ್ರತಿಭಟನೆ 'ಸೈಕ್ಲೊ ನ್ಯೂಡಿಸ್ಟಾ'. ಕನಿಷ್ಠ ವಸ್ತ್ರಗಳ ಜೊತೆ ಪ್ರತಿಭಟನಾ ಸೈಕ್ಲಿಂಗ್ ಶುರು. ತಾರಕಕ್ಕೇರಿದಂತೆ ಸೈಕಲ್‌ಗಳು ಮುಂದೋಡುತ್ತವೆ, ಉಡುಪುಗಳು ಹಿಂದೆ ಬೀಳುತ್ತವೆ. ಪೊಲೀಸರಿಗೆ ತಲೆತಗ್ಗಿಸಿ ವಸ್ತ್ರಗಳನ್ನಾಯುವ ಕೆಲಸ. ವಸ್ತ್ರದ ಹೊರೆ ಕಳೆದು ಖಾಲಿ ಖಾಲಿ ದೇಹಗಳನ್ನು ಹೊತ್ತ ಸೈಕಲ್‌ಗಳೇ ಧನ್ಯ.



ಆಸ್ಟ್ರೇಲಿಯದ ಅವಿವಾಹಿತ ಪ್ರಧಾನಿ ಜೂಲಿಯಾ ಜಿಲ್ಲಾರ್ಡ್‌ಗಿಂತ ಆಕೆಯ ಕೂದಲು ವಿನ್ಯಾಸಕ ಗೆಳೆಯನೇ ಈಗ ಸಾಕಷ್ಟು ಜನಪ್ರಿಯ. ಬೆಳಿಗ್ಗೆ 4ಕ್ಕೇ ಪ್ರಧಾನಿಯ ತಲೆ ಬಾಚಿ ಚೆಂದ ಮಾಡುವ ಈತನೆಂದರೆ ಹೆಂಗಳೆಯರು ಮುಗಿಬೀಳುತ್ತಿದ್ದಾರಂತೆ. ಜೊತೆಗೆ ಆತ ಪಸಂದಾಗಿ ಅಡುಗೆಯನ್ನೂ ಮಾಡುತ್ತಾನಂತೆ. ಪ್ರಧಾನಿ ನಿವಾಸದ ಬಾಣಸಿಗ, ಕೂದಲು ವಿನ್ಯಾಸಕನ ಖರ್ಚು ಉಳಿಸಿದ ಜೂಲಿಯಾಗೆ ಈ ಬಾರಿ ಪ್ರಶಸ್ತಿ ಗ್ಯಾರಂಟಿ.

ಶ್ರೀಲಂಕಾದಲ್ಲಿ ಸಲಿಂಗ ಕಾಮವೆಂದರೆ ಸ್ಯಾಡಿಸಂ ಎಂಬ ವಿಶ್ಲೇಷಣೆ ನೀಡಿದೆ ಅಲ್ಲಿಯ ಸರ್ಕಾರ. ಅದನ್ನು ಅಲ್ಲಿಯ ಸಲಿಂಗಿಗಳ ಸಂಘದ ಕಾರ್ಯಕರ್ತರು ಧಿಕ್ಕರಿಸಿ 'ಸ್ಯಾರಿಸಂ' ಗೆ ಇಳಿಸಿದ್ದಾರೆ. 'ನಮ್ಮ ಫ್ಯಾಷನ್ ಷೋನಲ್ಲಿ ನಾವೇ ರೂಪದರ್ಶಿಗಳು' ಎಂಬ ಸಂದೇಶವನ್ನೂ ವಸ್ತ್ರ ವಿನ್ಯಾಸಕರಿಗೆ ನೀಡಿದ್ದಾರಂತೆ.





ಮೊದಲೇ ಫುಟ್‌ಬಾಲ್ ಎಂದರೆ ಫುಟ್ ನೆಲದ ಮೇಲಿರಲ್ಲ.. ಹೆಡ್ ಭುಜದ ಮೇಲಿರಲ್ಲ. ದ.ಆಫ್ರಿಕಾದಲ್ಲಿ ವಿಶ್ವಕಪ್ ಫುಟ್‌ಬಾಲ್ ಪಂದ್ಯದಲ್ಲಿ ಆಗಿದ್ದೂ ಅದೇ. ಆಸ್ಟ್ರೇಲಿಯ ತಂಡ ಗೆಲ್ಲಲಿ ಎಂದು ಹರಕೆ ಹೊತ್ತ ಅಭಿಮಾನಿ ಕಾಲಿರುವಲ್ಲಿ ಕೈ ತಂದು, ತಲೆ ಇರುವಲ್ಲಿ ಕಾಲು ತಂದು..

ಫುಟ್ಬಾಲ್ ಜ್ಯೋತಿಷ್ಯ ಜರ್ಮನಿಯಲ್ಲಿ ಜನಪ್ರಿಯ. ಅದು ಬೀದಿ ಬದಿ ಗಿಳಿ ಭವಿಷ್ಯವಲ್ಲ, ಟಿವಿಯಲ್ಲಿನ ಫೋನ್‌ಇನ್ ಭವಿಷ್ಯವೂ ಅಲ್ಲ. ಉಪ್ಪು ನೀರಿನಾಳದಲ್ಲಿರುವ ಅಷ್ಟಪದಿ (ಅಕ್ಟೋಪಸ್) ವಿಶ್ವಕಪ್ ಫುಟ್‌ಬಾಲ್ ಪಂದ್ಯಗಳ ವಿಜೇತರನ್ನು ಕರಾರುವಾಕ್ಕಾಗಿ ಹೇಳುತ್ತದೆಯಂತೆ. ಅಂದರೆ ಚೀಟಿ ಎತ್ತುತ್ತದೆ. ಕಳೆದ ವಾರ ಇಂಗ್ಲೆಂಡ್ ವಿರುದ್ಧ ಜರ್ಮನಿ ಗೆಲ್ಲುತ್ತದೆ ಎಂದು ಚೀಟಿ ಎತ್ತಿದ್ದ ಈ ಅಷ್ಟಪದಿಯ ತವರು ಇಂಗ್ಲೆಂಡ್.



ನ್ಯೂಯಾರ್ಕ್‌ನ ಟೈಂ ಸ್ಕ್ವೇರ್‌ಗೆ ಕತ್ತಲೂ ಆಗದು, ಅದು ನಿದ್ರೆಯನ್ನೂ ಮಾಡದು ಎಂಬ ಮಾತಿದೆ. ಜೂನ್ 21ರ ದೀರ್ಘ ಹಗಲಿನ ದಿನವೇ ಅಲ್ಲಿ ಸಾವಿರಾರು ಮಂದಿ ಮಲಗಿಬಿಟ್ಟರು. ಯಾರೋ ಚಾಣಾಕ್ಷ ಭಾರತೀಯನೇ ಇರಬಹುದು, ಯೋಗ ಕಲಿಸಲು ಹೋಗಿ ಎಲ್ಲರನ್ನೂ ಯೋಗನಿದ್ರೆಗೆ ತಳ್ಳಿದ್ದು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65